
# ಜೀವವೈವಿಧ್ಯ ವಾರ್ತಾಪತ್ರ
# BIODIVERSITY NEWSLETTER
## ಕರ್ನಾಟಕ ಜೀವವೈವಿಧ್ಯ ಮಂಡಳಿ
(ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಇಲಾಖೆ, ಕರ್ನಾಟಕ ಸರ್ಕಾರ)
ನೆಲಮಹಡಿ, ವನ ವಿಕಾಸ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560 003

ಸಂಪುಟ – 2 ಸಂಚಿಕೆ – 3 ISSN 0975 - 1289 ಡಿಸಂಬರ್ 2020– ಮೇ 2021


## ಅಧ್ಯಕ್ಷರ ನುಡಿ



ಮಾನ್ಯರೇ,

ಕಳೆದ ಡಿಸಂಬರ್ ತಿಂಗಳಿನಿಂದ ಮೊನ್ನೆ ಮೇ ತಿಂಗಳ ಅಂತ್ಯದವರೆಗಿನ ಅವಧಿಯ ನಮ್ಮ ಮಂಡಳಿಯ ಸಾಧನೆಗಳ ಮಾಹಿತಿಗಳಿರುವ ಈ ವಾರ್ತಾಪತ್ರವನ್ನು ಸಂತಸದಿಂದ ತಮ್ಮ ಕೈಗಿಡುತ್ತಿದ್ದೇನೆ. ಸುಸ್ಥಿರ ಅಭಿವೃದ್ಧಿ ದೃಷ್ಟಿಯಿಂದ ಮಹತ್ವವಾಗಿರುವ ಜೀವವೈವಿಧ್ಯ ಸಂರಕ್ಷಣೆ ಕಾರ್ಯವನ್ನು ಇನ್ನೂ ಪರಿಣಾಮಕಾರಿಯಾಗಿಸಲು ತಾವು ನೀಡುವ ಸಲಹೆ–ಸೂಚನೆಗಳನ್ನು ಮಂಡಳಿಯು ಸದಾ ಸ್ವಾಗತಿಸುತ್ತದೆ.

ಈ ಅವಧಿಯಲ್ಲಾಗಿರುವ ಹಲವು ಮಹತ್ವದ ಕಾರ್ಯಗಳಲ್ಲಿ, ಮೂರನ್ನು ಇಲ್ಲಿ ಉಲ್ಲೇಖಿಸಲು ಹರ್ಷಿಸುತ್ತೇನೆ. ಮಲೆನಾಡು ಹಾಗೂ ಕರಾವಳಿ ಪ್ರದೇಶದಲ್ಲಿ ಕಳೆದ ಕೆಲವು ವರ್ಷಗಳಿಂದ ಘಟಿಸುತ್ತಿರುವ ವ್ಯಾಪಕ ಭೂಕುಸಿತವನ್ನು ತಡೆಗಟ್ಟುವ ಮಾರ್ಗೋಪಾಯಗಳನ್ನು ಸೂಚಿಸಲು, ಸನ್ಮಾನ್ಯ ಮುಖ್ಯಮಂತ್ರಿಗಳು ಕಳೆದ ವರ್ಷ ನನ್ನ ಅಧ್ಯಕ್ಷತೆಯಲ್ಲಿ ಉನ್ನತ ತಜ್ಞಸಮಿತಿಯೊಂದನ್ನು ರಚಿಸಿದ್ದರು. ಇಸ್ರೋ, ಜಿಯಾಲಜಿಕಲ್ ಸರ್ವೇ ಆಫ್ ಇಂಡಿಯಾ, ಭಾರತೀಯ ವಿಜ್ಞಾನ ಮಂದಿರ ಮುಂತಾದ ಸಂಶೋಧನಾ ಸಂಸ್ಥೆಗಳ ವಿಜ್ಞಾನಿಗಳು, ಸ್ವತಂತ್ರ ತಜ್ಞರು ಹಾಗೂ ಸರ್ಕಾರದ ವಿವಿಧ ಇಲಾಖೆಗಳ ಹಿರಿಯ ಅಧಿಕಾರಿಗಳು ಇದರ ಸದಸ್ಯರಾಗಿದ್ದರು. ಈ ಸಮಿತಿಯು ತನ್ನ ಅಂತಿಮ ಅಧ್ಯಯನ ವರದಿಯನ್ನು ಕಳೆದ ಏಪ್ರಿಲ್ ಒಂದರಂದು ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ಸಲ್ಲಿಸಿದ್ದು, ಈ ಮಹತ್ವದ ಕಾರ್ಯಕ್ಕೆ ವ್ಯಾಪಕ ಪ್ರಶಂಸೆ ವ್ಯಕ್ತವಾಗಿದೆ. ಇದು ಮಂಡಳಿಗೆ ಹೆಮ್ಮೆ ತರುವ ಸಂಗತಿಯಾಗಿದ್ದು, ಇದರಲ್ಲಿನ ಶಿಫಾರಸ್ಸುಗಳು ಸೂಕ್ತವಾಗಿ ಅನುಷ್ಠಾನಗೊಳ್ಳಲಿ ಎಂದು ಹಾರೈಸುತ್ತೇನೆ.

ಎರಡನೇಯದು, ಗ್ರಾಮೀಣಾಭಿವೃದ್ಧಿ ಇಲಾಖೆ ವ್ಯಾಪ್ತಿಗೆ ಬರುವ ಸ್ಥಳಿಯ ಸಂಸ್ಥೆಗಳ ಜೀವವೈವಿಧ್ಯ ನಿರ್ವಹಣಾ ಸಮಿತಿಗಳ ಸೂಕ್ತ ನಿರ್ವಹಣೆ ಕುರಿತು. ಈ ನಿಟ್ಟಿನಲ್ಲಿ ಆ ಇಲಾಖೆಯೊಂದಿಗೆ ಹಲವು ಹಂತಗಳಲ್ಲಿ ಸಮಾಲೋಚನೆ ನಡೆಸಲಾಯಿತು. ಇದರ ಫಲಶ್ರುತಿಯಾಗಿ, ಗ್ರಾಮೀಣಾಭಿವೃದ್ಧಿ ಇಲಾಖೆಯಲ್ಲಿ ಇದೀಗ ಉನ್ನತಮಟ್ಟದ ನೋಡಲ್ ಅಧಿಕಾರಿಯು ಗುರುತಿಸಲ್ಪಟ್ಟಿದ್ದು, ಮಂಡಳಿಯೊಂದಿಗೆ ಸಮನ್ವಯ ಸಾಧಿಸಲು ಸಹಕಾರಿಯಾಗಿದೆ, ಅಂತೆಯೇ, ಜೀವವೈವಿಧ್ಯ ನಿರ್ವಹಣಾ ಸಮಿತಿಗಳ ನಿರ್ವಹಣೆಯ ಮಾರ್ಗದರ್ಶಿ ಸೂತ್ರಗಳನ್ನೂ ರಚಿಸಲಾಗಿದೆ. ಜಿಲ್ಲೆ, ತಾಲ್ಲೂಕು ಹಾಗೂ ಗ್ರಾಮ ಪಂಚಾಯತ ಮಟ್ಟದಲ್ಲಿ ಜೀವವೈವಿಧ್ಯ ಸಂರಕ್ಷಣೆಗೆ ಹೆಚ್ಚಿನ ಆದ್ಯತೆ ದೊರಕಿಸಲು, ಈ ಪ್ರಯತ್ನಗಳು ಸಹಕಾರಿಯಾಗಲೆಂದು ಆಶಿಸುತ್ತೇನೆ.

ಮೂರನೇಯದು, ದೇಶದಲ್ಲೇ ಪ್ರಥಮ ಬಾರಿಗೆ ಹಮ್ಮಿಕೊಂಡಿರುವ ಮಾದರಿ ಎ.ಬಿ.ಎಸ್. ಯೋಜನೆ ಕುರಿತು. ಜೀವವೈವಿಧ್ಯಗಳನ್ನು ಬಳಸಿದಾಗ ಬರುವ ಲಾಭದ ಒಂದಂಶವನ್ನು ಸಂರಕ್ಷಣೆಯಲ್ಲಿ ತೊಡಗಿಸಿಕೊಂಡ ಸಮುದಾಯಗಳಿಗೂ ನೀಡುವದು (ಎ.ಬಿ.ಎಸ್), ಜೀವವೈವಿಧ್ಯ ಕಾನೂನಿನ ಒಂದು ಪ್ರಮುಖ ತತ್ವವಷ್ಟೇ? ಇದೀಗ, ದೇಶದಲ್ಲೇ ಮಾದರಿಯಾಗಿ ಅಂಥ ಒಂದು ಯೋಜನೆಗೆ ಚಾಲನೆ ನೀಡಲಾಗಿದ್ದು, ಮಂಡಳಿಯು ಎ.ಬಿ.ಎಸ್. ನಿಧಿಯಿಂದ ನೀಡುವ ಅನುದಾನದೊಂದಿಗೆ ರಾಜ್ಯದ ಎಂಟು ತಾಲ್ಲೂಕು ಪಂಚಾಯತ ಜೀವವೈವಿಧ್ಯ ನಿರ್ವಹಣಾ ಸಮಿತಿಗಳ ಮೂಲಕ ಜಾರಿಯಾಗುತ್ತಿದೆ. ಇವು ಯಶಸ್ವಿಯಾಗಿ ಅನುಷ್ಠಾನವಾಗಲೆಂದು ಹಾರೈಸುತ್ತೇನೆ.

ಮಂಡಳಿಯ ಕಾರ್ಯಗಳಿಗೆ ಸದಾ ಬೆಂಬಲ ಹಾಗೂ ಮಾರ್ಗದರ್ಶನ ನೀಡುತ್ತಿರುವ ಸನ್ಮಾನ್ಯ ಮುಖ್ಯಮಂತ್ರಿಗಳಾದ **ಶ್ರೀ ಬಿ. ಎಸ್. ಯಡಿಯೂರಪ್ಪನವರಿಗೆ** ಕೃತಜ್ಞನಾಗಿದ್ದೇನೆ. ಅಂತೆಯೇ, ಸನ್ಮಾನ್ಯ ಪರಿಸರ ಸಚಿವರಿಗೆ, ಸನ್ಮಾನ್ಯ ಅರಣ್ಯ ಸಚಿವರಿಗೆ, ಇಲಾಖೆಯ ಹಿರಿಯ ಅಧಿಕಾರಿಗಳಿಗೆ, ಮಂಡಳಿಯ ಆಡಳಿತ ಮಂಡಳಿಗೆ, ಅಧಿಕಾರಿಗಳು ಹಾಗೂ ಸಿಬ್ಬಂಧಿಗಳಿಗೆ– ಹಾರ್ದಿಕ ಧನ್ಯವಾದಗಳು. ಈ ಕೋವಿಡ್ ಸಂಕಟ ಬೇಗ ದೂರವಾಗಿ, ಜೀವವೈವಿಧ್ಯ ಸಂರಕ್ಷಣೆಯ ಪವಿತ್ರ ಕಾರ್ಯದಲ್ಲಿ ನಾವೆಲ್ಲ ಇನ್ನಷ್ಟು ರಚನಾತ್ಮಕವಾಗಿ ತೊಡಗಿಕೊಳ್ಳುವಂತಾಗಲಿ ಎಂದು ಹಾರೈಸುತ್ತೇನೆ.

5 ಜೂನ್ 2001 / ಬೆಂಗಳೂರು

**ಅನಂತ ಹೆಗಡೆ ಅಶೀಸರ**
ಅಧ್ಯಕ್ಷರು
ಕರ್ನಾಟಕ ಜೀವವೈವಿಧ್ಯ ಮಂಡಳಿ



**ಸಹ್ಯಾದ್ರಿ ಪ್ರದೇಶದಲ್ಲಿ ಘಟಿಸುತ್ತಿರುವ ಭೂಕುಸಿತವನ್ನು ತಡೆಯುವ ಮಾರ್ಗೋಪಾಯಗಳನ್ನು ಸೂಚಿಸಲು, ಜೀವವೈವಿಧ್ಯ ಮಂಡಳಿಯ ಅಧ್ಯಕ್ಷರ ನೇತೃತ್ವದಲ್ಲಿ ಸರ್ಕಾರವು ರಚಿಸಿದ್ದ ಉನ್ನತಮಟ್ಟದ ತಜ್ಞ ಸಮಿತಿಯು ತನ್ನ ಅಂತಿಮ ವರದಿಯನ್ನು ಸನ್ಮಾನ್ಯ ಮುಖ್ಯ ಮಂತ್ರಿಗಳಾದ ಶ್ರೀ ಬಿ. ಎಸ್. ಯಡಿಯೂರಪ್ಪನವರಿಗೆ ಸಲ್ಲಿಸಿದ ಸಂದರ್ಭ**



**“ವಿಶ್ವ ಜೌಗು ದಿನಾಚರಣೆ” ಸಂದರ್ಭದಲ್ಲಿ, ಮಂಡಳಿಯ ಅಧ್ಯಕ್ಷ ಶ್ರೀ ಅನಂತ ಹೆಗಡೆ ಅಶೀಸರ ನೇತೃತ್ವದ ತಜ್ಞರ ನಿಯೋಗವು, ರಾಮಪತ್ರೆಜಡ್ಡಿ ಜೌಗುಗಳ ರಕ್ಷಣೆ ಕುರಿತ ಶಿಫಾರಸ್ಸುಗಳನ್ನು, ಸನ್ಮಾನ್ಯ ಅರಣ್ಯ ಸಚಿವ ಶ್ರೀ ಅರವಿಂದ ಲಿಂಬಾವಳಿ ಅವರಿಗೆ ಸಲ್ಲಿಸಿತು**



**ಜೀವವೈವಿಧ್ಯದ “ಸುಸ್ಥಿರ ಬಳಕೆ ಹಾಗೂ ಲಾಭಹಂಚಿಕೆ (ಏ.ಬಿ.ಎಸ್.)” ಕುರಿತ ರಾಜ್ಯಮಟ್ಟದ ಕಾರ್ಯಾಗಾರವನ್ನು ಸನ್ಮಾನ್ಯ ಪರಿಸರ ಸಚಿವರಾದ ಶ್ರೀ ಸಿ.ಪಿ. ಯೋಗೇಶ್ವರ ಅವರು ಉದ್ಘಾಟಿಸಿದರು.ಮುಖ್ಯ ಅತಿಥಿಗಳಾಗಿ ಅರಣ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷರಾದ ಶ್ರೀಮತಿ ತಾರಾ ಅನುರಾಧ ಹಾಗೂ ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿಯ ಹಿಂದಿನ ಅಧ್ಯಕ್ಷರಾದ ಡಾ.ವಾಮನ ಅಚಾರ್ಯ ಭಾಗವಹಿಸಿದ್ದರು**

## ಪರಿವಿಡಿ

**ಈ ಸಂಚಿಕೆಯ ಕುರಿತು**


1. ಸುದ್ದಿ ಸಂಚಯ
2. ಜೀವವೈವಿಧ್ಯ ಮಂಡಳಿಯ ಸಭೆಗಳು
3. ವಿಶೇಷ ಕಾರ್ಯಾಗಾರಗಳು
4. ಸಭೆ-ಸಮ್ಮೇಳನಗಳು
5. ಸಮಾಲೋಚನೆ ಹಾಗೂ ಪ್ರಗತಿ ಪರಿಶೀಲನೆ ಸಭೆಗಳು, ಸ್ಥಳಭೇಟಿ ವಿವರ
6. ಯಶೋಗಾಥೆಗಳು
7. ಛಾಯಾಚಿತ್ರ ಅಂಕಣ


## ಈ ಸಂಚಿಕೆಯ ಕುರಿತು..

**ಪ್ರಿಯ ಓದುಗರೇ**

ಕರ್ನಾಟಕ ಜೀವವೈವಿಧ್ಯ ಮಂಡಳಿಯ ಈ ನೂತನ ವಾರ್ತಾಪತ್ರದಲ್ಲಿ ಕಳೆದ ಆರು ತಿಂಗಳ ಸಾಧನೆಗಳ ಸಂಕ್ಷಿಪ್ತ ಮಾಹಿತಿಗಳಿವೆ. ಕೋವಿಡ್ ಮಿತಿಯ ನಡುವೆಯೂ, ಮಂಡಳಿಯು ಹಲವು ಆಯಾಮಗಳಲ್ಲಿ ಕಾರ್ಯಶೀಲವಾಗಿರುವದನ್ನು ಇವು ತಿಳಿಸಬಲ್ಲವು. ಅವನ್ನು ಈ ಕೆಳಗಿನ ಮೂರು ವಿಧಗಳಲ್ಲಿ ಗುರುತಿಸಬಹುದಾಗಿದ್ದು, ವಿವರ ಮುಂದಿನ ಪುಟಗಳಲ್ಲಿವೆ.

ಮೊದಲಿನದು, ಸಭೆಗಳು ಹಾಗೂ ಕಾರ್ಯಾಗಾರಗಳ ಕುರಿತು. ಇವುಗಳಲ್ಲಿ ಮಂಡಳಿಯ ಆಡಳಿತ ಮಂಡಳಿಯ ಸಭೆ, ಆಂತರಿಕ ಆಡಳಿತಾತ್ಮಕ ಸಭೆಗಳು, ಸರ್ಕಾರದ ಉನ್ನತಮಟ್ಟದಲ್ಲಿ ನಡೆಸಿದ ಸಮಾಲೋಚನಾ ಸಭೆಗಳು, ಅಂತರ್–ಇಲಾಖಾ ಕಾರ್ಯಾಗಾರಗಳು ಸೇರಿವೆ. ಇವೆಲ್ಲವುಗಳ ಫಲಶೃತಿಯಿಂದಾಗಿ, ಮಂಡಳಿಯ ಕಾರ್ಯಗಳು ಪರಿಣಾಮಕಾರಿಯಾಗಿ ಅನುಷ್ಠಾನಗೊಳ್ಳಲು ಸಾಧ್ಯವಾಗಿದೆ.

ಎರಡನೇಯದು, ಮಂಡಳಿಯ ಅಧ್ಯಕ್ಷರು ರಾಜ್ಯಾದ್ಯಂತ ವಿವಿಧ ಜಿಲ್ಲೆಗಳಿಗೆ ಭೇಟ್ಟಿಯಿತ್ತು, ಸಮಾಲೋಚನಾ ಹಾಗೂ ಜೀವವೈವಿಧ್ಯ ಕಾನೂನು ಅನುಷ್ಠಾನ ಪ್ರಗತಿ ಪರಿಶೀಲನಾ ಸಭೆಗಳನ್ನು ನಡೆಸಿರುವದರ ಕುರಿತು. ಇದು ಮಂಡಳಿಯ ಆಶಯಗಳನ್ನು ತಳಮಟ್ಟಕ್ಕೆ ಪರಿಣಾಮಕಾರಿಯಾಗಿ ತಲುಪಿಸಲು ಸಹಕಾರಿಯಾಗಿರುವದನ್ನು ಇಲ್ಲಿ ಉಲ್ಲೇಖಿಸಬೇಕಿದೆ.

ಕೊನೆಯದಾಗಿ, ರಾಜ್ಯಾದ್ಯಂತ ಜೀವವೈವಿಧ್ಯ ನಿರ್ವಹಣಾ ಸಮಿತಿಗಳು ಬಲಗೊಳ್ಳುತ್ತಿರುವ ಶುಭ ಸೂಚನೆಗಳ ಕುರಿತು. ಮಂಡಳಿಯ ನಿರಂತರ ಬಲವರ್ಧನೆ ಪ್ರಯತ್ನಗಳಿಂದಾಗಿ, ಈ ಸಮಿತಿಗಳು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲು ತೊಡಗಿರುವ ಚಿತ್ರಣ ಹೊರಹೊಮ್ಮುತ್ತಿದೆ. ಅಂಥ ಕೆಲವು ಕ್ರಿಯಾಶೀಲ ಸಮಿತಿಗಳ ಯಶೋಗಾಥೆಗಳನ್ನು ಪ್ರಾತಿನಿಧಿಕವಾಗಿ ಇಲ್ಲಿ ನೀಡಲಾಗಿದೆ.

ಹೀಗೆ, ಜೀವವೈವಿಧ್ಯ ಸಂರಕ್ಷಣೆ, ಸಂವರ್ಧನೆ ಹಾಗೂ ಸುಸ್ಥಿರ ಬಳಕೆ ಕುರಿತಾಗಿನ ಈ ಎಲ್ಲ ಮಾಹಿತಿಗಳು ಸಾರ್ವಜನಿಕರಿಗೆ ತಲುಪಿ, ಈ ಕಾರ್ಯಗಳು ಇನ್ನಷ್ಟು ಯಶಸ್ವಿಯಾಗಲು ಜನಸಭಾಗಿತ್ವ ದೊರಕಲಿ ಎಂದು ಹಾರೈಸುತ್ತೇವೆ.

– **ಸಂಪಾದಕೀಯ ಮಂಡಳಿ**



ಅರಣ್ಯಭವನದಲ್ಲಿ ಜರುಗಿದ ರಾಜ್ಯ ಅರಣ್ಯ ಅಧಿಕಾರಿಗಳ ಸಮ್ಮೇಳನವನ್ನು ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪನವರು ಉದ್ಘಾಟಿಸಿದ ಸಂದರ್ಭದಲ್ಲಿ ಮಂಡಳಿಯ ಅಧ್ಯಕ್ಷರು ಉಪಸ್ಥಿತರಿದ್ದರು .



ಅರಣ್ಯಭವನದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳು ಗಿಡನೆಡುತ್ತಿರುವ ಸಂದರ್ಭದಲ್ಲಿ ಮಾನ್ಯ ಅರಣ್ಯ ಸಚಿವರು ಹಾಗೂ ಹಿರಿಯ ಅಧಿಕಾರಿಗಳ ಜೊತೆಗೆ ಮಂಡಳಿಯ ಅಧ್ಯಕ್ಷರು ಭಾಗವಹಿಸಿದ್ದರು.



ಕರಾವಳಿಯ ಕಾಂಡ್ಲಾಕಾಡು ಹಾಗೂ ಗುಡವಿ ಪಕ್ಷಿಧಾಮ ಸಂರಕ್ಷಣಾ ಯೋಜನೆಗಳ ಕುರಿತು, ಮಂಡಳಿಯ ಅಧ್ಯಕ್ಷರು ಸನ್ಮಾನ್ಯ ಮುಖ್ಯಮಂತ್ರಿಗಳನ್ನು ಭೇಟ್ಟಿಯಾಗಿ ಮನವಿ ಸಲ್ಲಿಸಿದರು.



ಬೆಂಗಳೂರಿನ ತಾತಗುಣಿ ಎಸ್ಟೇಟಿನ ಅರಣ್ಯವನ್ನು "ನೈಸರ್ಗಿಕ ಪಾರಂಪರಿಕ ತಾಣ"ವೆಂದು ಗುರುತಿಸುವ ಕುರಿತು, ಅಂದಿನ ಮುಖ್ಯ ಕಾರ್ಯದರ್ಶಿಗಳಾದ ಶ್ರೀ ಟಿ.ಎಮ್. ವಿಜಯ ಭಾಸ್ಕರ ಅವರನ್ನು ಮಂಡಳಿಯ ಅಧ್ಯಕ್ಷರು ಭೇಟ್ಟಿಮಾಡಿ ಚರ್ಚಿಸಿದರು.

# ಜೀವವೈವಿಧ್ಯ ಮಂಡಳಿಯ ಸಭೆಗಳು

**ಆಡಳಿತ ಮಂಡಳಿಯ ಸಭೆ:** ದಿ.28/01/2021ರಂದು ಜರುಗಿದ ಕರ್ನಾಟಕ ಜೀವವೈವಿಧ್ಯ ಮಂಡಳಿಯ 46ನೇ ಆಡಳಿತ ಮಂಡಳಿಯ ಸಭೆಯಲ್ಲಿ, ಆಡಳಿತಾತ್ಮಕ ಸಂಗತಿಗಳ ಜೊತೆಗೆ ಈ ಕೆಳಗಿನ ಪ್ರಮುಖ ನಿರ್ಧಾರಗಳನ್ನು ಕೈಗೊಳ್ಳಲಾಯಿತು:

- ಜೀವವೈವಿಧ್ಯಗಳ ಸುಸ್ಥಿರ ಬಳಕೆಯಿಂದ ದೊರಕುವ ಲಾಭದ ನ್ಯಾಯಯುತ ಹಂಚಿಕೆ ನಿಯಮದಡಿ (ಎ.ಬಿ.ಎಸ್.) ಸಂಗ್ರಹವಾಗುವ ನಿಧಿಯನ್ನು ಬಳಸಿ, ರಾಜ್ಯದ ಎಂಟು ತಾಲ್ಲೂಕು ಪಂಚಾಯತಗಳ **"ಜೀವವೈವಿಧ್ಯ ನಿರ್ವಹಣಾ ಸಮಿತಿಗಳಿಗೆ" "ಜೀವವೈವಿಧ್ಯ ಸಂರಕ್ಷಣೆಯ ಮಾದರಿ ಎ.ಬಿ.ಎಸ್. ಯೋಜನೆ"** ಹಮ್ಮಿಕೊಳ್ಳಲು ಅನುದಾನ ನೀಡುವ ಪ್ರಸ್ತಾವವನ್ನು ಅಂಗೀಕರಿಸಲಾಯಿತು. ದೇಶದಲ್ಲೇ ಮೊದಲಬಾರಿಗೆ ಜಾರಿಯಾಗುತ್ತಿರುವ ಈ ಬಗೆಯ ಯೋಜನೆಯಿದು.
- ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರ ತಾಲ್ಲೂಕಿನ **"ಕತ್ತಲೆಕಾನು ರಾಮಪತ್ರೆಜಡ್ಡಿ"** ಅರಣ್ಯ ಹಾಗೂ ಬೆಂಗಳೂರಿನ ಹೊರವಲಯದ **"ತಾತಗುಣಿ ಎಸ್ಟೇಟ್"** ಪ್ರದೇಶಗಳನ್ನು **"ನೈಸರ್ಗಿಕ ಪಾರಂಪರಿಕ ತಾಣ"**ಗಳೆಂದು ಗುರುತಿಸಲು ತಾತ್ವಿಕ ಒಪ್ಪಿಗೆ ನೀಡಿದ್ದು, ಅಧಿಕೃತ ಘೋಷಣೆಯ ಕಾನೂನು ಪ್ರಕ್ರಿಯೆ ಕೈಗೊಳ್ಳಲಾಗುವುದು.
- ದಾವಣಗೆರೆ ಜಿಲ್ಲೆಯ ಹರಿಹರ ತಾಲ್ಲೂಕಿನ **"ಕೊಂಡಜ್ಜಿ ಕೆರೆ"**ಯನ್ನು **"ಸಮುದಾಯ ಸಂರಕ್ಷಿತ ಪ್ರದೇಶ"**ವೆಂದು ಘೋಷಿಸಲು ರಾಜ್ಯ ವನ್ಯಜೀವಿ ಮಂಡಳಿಗೆ ಶಿಫಾರಸು ಮಾಡಲಾಯಿತು.
- ರಾಜ್ಯದಲ್ಲಿನ **"ವಿನಾಶದಂಚಿಗೆ ತಲುಪಿರುವ ಸಸ್ಯ ಹಾಗೂ ಪ್ರಾಣಿಪ್ರಬೇಧಗಳ ಯಾದಿ"**ಯನ್ನು ತಯಾರಿಸಲು, ಮಂಡಳಿಯು ರಚಿಸಿದ್ದ ತಜ್ಞರ ಸಮಿತಿಗಳು ಸಲ್ಲಿಸಿದ ವರದಿಗಳನ್ನು ಮಂಡಳಿಯು ಅನುಮೋದಿಸಿ, ಅಧಿಕೃತವಾಗಿ ಪ್ರಕಟಿಸುವ ಕಾನೂನು ಪ್ರಕ್ರಿಯೆ ಕೈಗೊಳ್ಳಲು ನಿರ್ಧರಿಸಲಾಯಿತು.
- ಮಂಡಳಿಯ ಆರ್ಥಿಕ ಸಹಕಾರದೊಂದಿಗೆ ಮಂಗಳೂರು ಬಳಿಯ ಪಿಲಿಕುಳ ನಿಸರ್ಗಧಾಮವು ಕೈಗೊಂಡಿರುವ, **"Establishment of Herbarium and Botanical Museum of the plants of Western Ghats"** ಯೋಜನೆಯು ಪೂರ್ಣಗೊಂಡಿದ್ದು, ಇದನ್ನು ಸಂರಕ್ಷಣೆಗೆ ಪೂರಕವಾದ ಸಂಶೋಧನೆ, ತರಬೇತಿ ಹಾಗೂ ಮಾಹಿತಿ ಪ್ರಸರಣ ಕಾರ್ಯಗಳಿಗೆ ಬಳಸಲು ಹಾಗೂ ಇದರ ಅಂತಿಮ ಯೋಜನಾ ವರದಿಯನ್ನು ಸಲ್ಲಿಸಲು ಸೂಚಿಸಲಾಯಿತು.

**ರಾಷ್ಟ್ರೀಯ ಜೀವವೈವಿಧ್ಯ ಪ್ರಾಧಿಕಾರ (NBA) ಆಯೋಜಿಸಿದ ಸಭೆಗಳು:**

- ದಿ.08/12/2020ರಂದು ಅಂತರ್ಜಾಲ ಮಾಧ್ಯಮದಲ್ಲಿ ಜರುಗಿದ **"ಜೀವವೈವಿಧ್ಯ ನಿರ್ವಹಣಾ ಸಮಿತಿಗಳು ಹಾಗೂ ಜೀವವೈವಿಧ್ಯ ದಾಖಲಾತಿ ವರದಿಗಳ ಪ್ರಗತಿ ಪರಿಶೀಲನೆ ಸಭೆ"**ಯಲ್ಲಿ, ಮಂಡಳಿಯ ಅಧ್ಯಕ್ಷರು, ಸದಸ್ಯ ಕಾರ್ಯದರ್ಶಿಗಳು ಹಾಗೂ ಅಧಿಕಾರಿಗಳು ಪಾಲ್ಗೊಂಡರು.
- ದಿ.11 & 12 ಡಿಸಂಬರ್ 2020ರಂದು ಅಂತರ್ಜಾಲ ಮಾಧ್ಯಮದಲ್ಲಿ ಜರುಗಿದ, **"ರಾಜ್ಯ ಜೀವವೈವಿಧ್ಯ ಮಂಡಳಿಗಳ ವಾರ್ಷಿಕ ಸಭೆ"**ಯಲ್ಲಿ ಮಂಡಳಿಯ ಅಧ್ಯಕ್ಷರು, ಸದಸ್ಯ ಕಾರ್ಯದರ್ಶಿಗಳು ಹಾಗೂ ಅಧಿಕಾರಿಗಳು ಪಾಲ್ಗೊಂಡರು.
- ದಿ.22/01/2021ರಂದು ಅಂತರ್ಜಾಲ ಮಾಧ್ಯಮದಲ್ಲಿ ಜರುಗಿದ, **"ಜೀವವೈವಿಧ್ಯದ ಸುಸ್ಥಿರ ಬಳಕೆ ಹಾಗೂ ಲಾಭಹಂಚಿಕೆ"** (ಎ.ಬಿ.ಎಸ್.) ರಾಷ್ಟ್ರೀಯ ಸಭೆಯಲ್ಲಿ ಮಂಡಳಿಯ ಅಧ್ಯಕ್ಷರು, ಸದಸ್ಯ ಕಾರ್ಯದರ್ಶಿಗಳು ಹಾಗೂ ಅಧಿಕಾರಿಗಳು ಪಾಲ್ಗೊಂಡರು.

**ಆಂತರಿಕ ಆಡಳಿತಾತ್ಮಕ ಸಭೆ:**

ದಿ.3/01/2021ರಂದು **"ಜೀವವೈವಿಧ್ಯ ಮಂಡಳಿಯ ಲಾಭಹಂಚಿಕೆ(ಎ.ಬಿ.ಎಸ್.) ತಜ್ಞಸಮಿತಿ"**ಯ ನಾಲ್ಕನೇ ಸಭೆಯು ಸಮಿತಿಯ ಅಧ್ಯಕ್ಷರಾದ ಶ್ರೀ ಐ. ಕೆ. ವರ್ಮಾ (ನಿವೃತ್ತ ಪಿ.ಸಿ.ಸಿ.ಎಫ್.) ಮಾರ್ಗದರ್ಶನದಲ್ಲಿ ನಡೆಯಿತು.



ಮಂಡಳಿಯ ವಾರ್ತಾಪತ್ರದ ಬಿಡುಗಡೆ ಕಾರ್ಯಕ್ರಮದಲ್ಲಿ, ಅಧ್ಯಕ್ಷರೊಂದಿಗೆ ಹಿರಿಯ ಅರ್ಥಶಾಸ್ತ್ರಜ್ಞ ಪ್ರೊ. ಬಿ. ಎಮ್. ಕುಮಾರಸ್ವಾಮಿ ಹಾಗೂ ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮ ಅಧ್ಯಕ್ಷರಾದ ಶ್ರೀಮತಿ ತಾರಾ ಅನುರಾಧ.



"ಜೀವವೈವಿಧ್ಯ ನಿರ್ವಹಣಾ ಸಮಿತಿಗಳ ಸಬಲೀಕರಣ" ಕುರಿತ ಕಾರ್ಯಾಗಾರದಲ್ಲಿ, ಮಂಡಳಿಯ ಅಧ್ಯಕ್ಷರು, ಕೇಂದ್ರ ಸರ್ಕಾರದ ಜೈವಿಕ ಇಂಧನ ಕಾರ್ಯಪಡೆ ಅಧ್ಯಕ್ಷರಾದ ಶ್ರೀ ವಾಯ್. ಬಿ. ರಾಮಕೃಷ್ಣ ಹಾಗೂ ಹಿರಿಯ ಅಧಿಕಾರಿಗಳು.



ಪಶ್ಚಿಮಘಟ್ಟದ ಭೂಕುಸಿತದ ಕುರಿತಾಗಿ ತಜ್ಞಸಮಿತಿಯು ರಾಜ್ಯ ಸರ್ಕಾರಕ್ಕೆ ಸಲ್ಲಿಸಿರುವ ವರದಿಯ ಪ್ರತಿಯನ್ನು, ಮಂಡಳಿಯ ಅಧ್ಯಕ್ಷರು ಕೇಂದ್ರ ಅರಣ್ಯ ಮತ್ತು ಪರಿಸರ ಮಂತ್ರಾಲಯದ ದಕ್ಷಿಣಭಾರತ ಕಛೇರಿಯ ಮುಖ್ಯಸ್ಥರಿಗೆ ನೀಡುತ್ತಿರುವುದು.



ಮಂಡಳಿಯ ಅಧ್ಯಕ್ಷರು, ಅರಣ್ಯ ಇಲಾಖೆಯ ಸನ್ಮಾನ್ಯ ಸಚಿವರಾದ ಶ್ರೀ ಅರವಿಂದ ಲಿಂಬಾವಳಿ ಅವರಿಗೆ, ದೇವರಕಾಡು ಹಾಗೂ ಸಾಮೂಹಿಕ ಭೂಮಿ ಸಂರಕ್ಷಣೆ ಕುರಿತು ಮನವಿ ಸಲ್ಲಿಸುತ್ತಿರುವುದು.

## ವಿಶೇಷ ಕಾರ್ಯಾಗಾರಗಳು

- ದಿ.21/12/2020ರಂದು, ಜೀವವೈವಿಧ್ಯ ನಿರ್ವಹಣಾ ಸಮಿತಿಗಳ ಸಬಲೀಕರಣ ಹಾಗೂ ಜೀವವೈವಿಧ್ಯ ದಾಖಲಾತಿ ಕಾರ್ಯಗಳ ಸಮರ್ಪಕ ಅನುಷ್ಠಾನದ ಕುರಿತಾಗಿ ಗ್ರಾಮೀಣಾಭಿವೃದ್ಧಿ ಇಲಾಖೆಯ ಹಿರಿಯ ಅಧಿಕಾರಿಗಳೊಂದಿಗೆ ಸಮಾಲೋಚನಾ ಕಾರ್ಯಾಗಾರ ನಡೆಯಿತು. ಕೇಂದ್ರ ಸರ್ಕಾರದ ಜೈವಿಕ ಇಂಧನ ಕಾರ್ಯಪಡೆ ಅಧ್ಯಕ್ಷರಾದ **ಶ್ರೀ ವಾಯ್. ಬಿ. ರಾಮಕೃಷ್ಣ** ಅವರು ಮುಖ್ಯ ಅತಿಥಿಗಳಾಗಿದ್ದರು. ಮಂಡಳಿಯ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ನಡೆದ ಈ ಸಭೆಯಲ್ಲಿ ಸದಸ್ಯ ಕಾರ್ಯದರ್ಶಿಗಳು, ಅಧಿಕಾರಿಗಳು, ಅರಣ್ಯ ಇಲಾಖೆಯ ವಿವಿಧ ಅಧಿಕಾರಿಗಳು ಭಾಗವಹಿಸಿದ್ದರು.
- ದಿ.29.01.2021ರಂದು, ಸ್ಥಳೀಯ ಸಂಸ್ಥೆಗಳ ಜೀವವೈವಿಧ್ಯ ನಿರ್ವಹಣಾ ಸಮಿತಿಗಳ ಸಬಲೀಕರಣ ಕುರಿತಾಗಿ ರಾಜ್ಯಮಟ್ಟದ ಕಾರ್ಯಾಗಾರವು ಅರಣ್ಯ ಹಾಗೂ ಗ್ರಾಮೀಣಾಭಿವೃದ್ಧಿ ಇಲಾಖೆಯ ಸಹಭಾಗಿತ್ವದಲ್ಲಿ ಜರುಗಿತು. ಗ್ರಾಮೀಣಾಭಿವೃದ್ಧಿ ಇಲಾಖೆಯ ಸನ್ಮಾನ್ಯ ಸಚಿವರಾದ **ಶ್ರೀ ಈಶ್ವರಪ್ಪನವರು** ಇದನ್ನು ಉದ್ಘಾಟಿಸಿ, ಇಲಾಖೆಯ ಯೋಜನೆಗಳ ಕುರಿತು ಮಾರ್ಗದರ್ಶನ ಮಾಡಿದರು. ಮಂಡಳಿಯ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಆ ನಂತರ ನಡೆದ ವಿವಿಧ ಗೋಷ್ಠಿಗಳಲ್ಲಿ, ಸದಸ್ಯ ಕಾರ್ಯದರ್ಶಿಗಳು, ಅಧಿಕಾರಿಗಳು, ಅರಣ್ಯ ಹಾಗೂ ಗ್ರಾಮೀಣಾಭಿವೃದ್ಧಿ ಇಲಾಖೆಯ ವಿವಿಧ ಅಧಿಕಾರಿಗಳು ಮಾಹಿತಿ ಹಂಚಿಕೊಂಡರು. ಇವೆಲ್ಲವನ್ನೂ ಕ್ರೋಢಿಕರಿಸಿ, ಗ್ರಾಮೀಣಾಭಿವೃದ್ಧಿ ಇಲಾಖೆಯ ಮೂಲಕ ಜೀವವೈವಿಧ್ಯ ನಿರ್ವಹಣಾ ಸಮಿತಿಗಳ ನಿರ್ವಹಣೆಗೆ ಸಮಗ್ರ ಮಾರ್ಗದರ್ಶೀ ಸೂತ್ರ ರಚಿಸಲು ನಿರ್ಧರಿಸಲಾಯಿತು.
- ದಿ.06/03/2021ರಂದು ಹಮ್ಮಿಕೊಂಡ ಜೀವವೈವಿಧ್ಯದ **"ಸುಸ್ಥಿರ ಬಳಕೆ ಹಾಗೂ ಲಾಭಹಂಚಿಕೆ (ಎ.ಬಿ.ಎಸ್.)"** ಕುರಿತ ರಾಜ್ಯ ಮಟ್ಟದ ಕಾರ್ಯಾಗಾರವನ್ನು ಸನ್ಮಾನ್ಯ ಪರಿಸರ ಇಲಾಖೆ ಸಚಿವರಾದ **ಶ್ರೀ ಸಿ.ಪಿ. ಯೋಗೇಶ್ವರ** ಅವರು ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮ ಅಧ್ಯಕ್ಷರಾದ **ಶ್ರೀಮತಿ ತಾರಾ ಅನುರಾಧ** ಹಾಗೂ ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿಯ ಹಿಂದಿನ ಅಧ್ಯಕ್ಷರಾದ **ಡಾ.ವಾಮನ ಅಚಾರ್ಯ** ಭಾಗವಹಿಸಿದ್ದರು. ಈ ಸಂದರ್ಭದಲ್ಲಿ, ರಾಜ್ಯದ ಎಂಟು ತಾಲ್ಲೂಕು ಪಂಚಾಯತಿ **"ಜೀವವೈವಿಧ್ಯ ನಿರ್ವಹಣಾ ಸಮಿತಿಗಳ"** ಮೂಲಕ ದೇಶದಲ್ಲೇ ಮೊದಲಬಾರಿಗೆ ಜಾರಿಯಾಗುತ್ತಿರುವ **"ಮಾದರಿ ಎ.ಬಿ.ಎಸ್.ಯೋಜನೆ"ಗೆ** ಚಾಲನೆ ನೀಡಲಾಯಿತು (ಯಲ್ಲಾಪುರ,ಶಿರಸಿ, ಸಿದ್ದಾಪುರ, ಹೊನ್ನಾವರ, ಸಾಗರ, ಸೊರಬ, ತೀರ್ಥಹಳ್ಳಿ, ಹಾಗೂ ಬಳ್ಳಾರಿ ತಾಲ್ಲೂಕು ಪಂಚಾಯತಿಗಳು).ಮಂಡಳಿಯ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಆ ನಂತರ ನಡೆದ ಗೋಷ್ಠಿಗಳಲ್ಲಿ, ಸದಸ್ಯ ಕಾರ್ಯದರ್ಶಿಗಳು, ಅಧಿಕಾರಿಗಳು, ಅರಣ್ಯ ಇಲಾಖೆಯ ಹಿರಿಯ ಅಧಿಕಾರಿಗಳು, ಪರಿಸರ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು, ಎ.ಬಿ.ಎಸ್. ತಜ್ಞಸಮಿತಿಯ ಅಧ್ಯಕ್ಷ **ಶ್ರೀ ಎ. ಕೆ. ವರ್ಮಾ (ನಿವೃತ್ತ ಪಿ.ಸಿ.ಸಿ.ಎಫ್.)** ಹಾಗೂ ಸದಸ್ಯರುಗಳು, ಜೈವಿಕ ಸಂಪನ್ಮೂಲಗಳನ್ನು ಬಳಸುವ ವಿವಿಧ ಉದ್ದಿಮೆಗಳ ಪ್ರತಿನಿಧಿಗಳು ಹಾಗೂ ವಿವಿಧ ವಿಷಯ ತಜ್ಞರು ಮಾಹಿತಿ ಹಂಚಿಕೊಂಡರು.




ಗ್ರಾಮೀಣಾಭಿವೃದ್ಧಿ ಇಲಾಖೆಯ ಜೊತೆ ಸಂಘಟಿಸಿದ್ದ, "ಜೀವವೈವಿಧ್ಯ ನಿರ್ವಹಣಾ ಸಮಿತಿಗಳ ಸಬಲೀಕರಣ" ಕಾರ್ಯಾಗಾರದಲ್ಲಿ, ಸನ್ಮಾನ್ಯ ಸಚಿವ ಶ್ರೀ ಈಶ್ವರಪ್ಪನವರು, ಮಂಡಳಿಯ ಅಧ್ಯಕ್ಷರು ಹಾಗೂ ಹಿರಿಯ ಅಧಿಕಾರಿಗಳು.



"ಜೀವವೈವಿಧ್ಯದ ಸುಸ್ಥಿರ ಬಳಕೆ ಹಾಗೂ ಲಾಭಹಂಚಿಕೆ (ಎ.ಬಿ.ಎಸ್.)" ಮಾದರಿ ಯೋಜನೆಗೆ, ಸನ್ಮಾನ್ಯ ಪರಿಸರ ಸಚಿವ ಶ್ರೀ ಸಿ.ಪಿ. ಯೋಗೇಶ್ವರ ಚಾಲನೆ ನೀಡಿದ ಸಂದರ್ಭದಲ್ಲಿ, ಮಂಡಳಿಯ ಅಧ್ಯಕ್ಷರು, ಅರಣ್ಯ ಅಭಿವೃದ್ಧಿ ನಿಗಮ ಅಧ್ಯಕ್ಷ ಶ್ರೀಮತಿ ತಾರಾ ಅನುರಾಧ, ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಹಿಂದಿನ ಅಧ್ಯಕ್ಷ ಡಾ.ವಾಮನ ಅಚಾರ್ಯ ಹಾಗೂ ಹಿರಿಯ ಅಧಿಕಾರಿಗಳು.




"ಜೀವವೈವಿಧ್ಯ ನಿರ್ವಹಣಾ ಸಮಿತಿಗಳ ಸಬಲೀಕರಣ" ಕಾರ್ಯಾಗಾರದಲ್ಲಿ, ಸನ್ಮಾನ್ಯ ಸಚಿವ ಶ್ರೀ ಈಶ್ವರಪ್ಪನವರು ಹಾಗೂ ಮಂಡಳಿಯ ಅಧ್ಯಕ್ಷರೊಂದಿಗೆ, ಮಂಡಳಿಯ ಅಧಿಕಾರಿಗಳು ಹಾಗೂ ಸಿಬ್ಬಂಧಿಗಳು.




"ಜೀವವೈವಿಧ್ಯದ ಸುಸ್ಥಿರ ಬಳಕೆ ಹಾಗೂ ಲಾಭಹಂಚಿಕೆ (ಎ.ಬಿ.ಎಸ್.)" ಕಾರ್ಯಾಗಾರದಲ್ಲಿ ಮಂಡಳಿಯ ಅಧ್ಯಕ್ಷರು, ಎ.ಬಿ.ಎಸ್. ತಜ್ಞಸಮಿತಿ ಅಧ್ಯಕ್ಷ ಶ್ರೀ ಎ. ಕೆ. ವರ್ಮಾ, ವಿವಿಧ ತಜ್ಞರು ಹಾಗೂ ಅಧಿಕಾರಿಗಳು.

## ವಿಶೇಷ ಸಭೆ – ಸಮ್ಮೇಳನಗಳು

- ದಿ.8/12/20ರಂದು, ಅಧ್ಯಕ್ಷರಾದ ಶ್ರೀ ಅನಂತ ಹೆಗಡೆ ಅಶೀಸರ ಅವರ ನೇತೃತ್ವದಲ್ಲಿ ಮಂಡಳಿಯ ನಿಯೋಗವು ಮೀನುಗಾರಿಕಾ ಇಲಾಖೆ ಸನ್ಮಾನ್ಯ ಸಚಿವರಾದ **ಶ್ರೀ ಕೆ. ಶ್ರೀನಿವಾಸ ಪೂಜಾರಿ** ಅವರನ್ನು ಭೇಟಿಯಾಗಿ, ರಾಜ್ಯದಲ್ಲಿ ಹೊಸದಾಗಿ ಸ್ಥಾಪಿಸಲು ಗುರುತಿಸಿರುವ **"ಮತ್ಸ್ಯಧಾಮ"**ಗಳ ಕುರಿತ ಮಂಡಳಿಯ ನಿರ್ಣಯವನ್ನು ಸಲ್ಲಿಸಿತು. ಇವನ್ನು ಶೀಘ್ರವಾಗಿ ಅಧಿಕೃತವಾಗಿ ಘೋಷಿಸುವ ಕುರಿತಂತೆ ವಿವರವಾಗಿ ಚರ್ಚಿಸಲಾಯಿತು. ಇದನ್ನು ಆದ್ಯತೆಯಲ್ಲಿ ಕೈಗೊಳ್ಳುವದಾಗಿ ಸನ್ಮಾನ್ಯ ಸಚಿವರು ಹೇಳಿದರು.
- ದಿ.8/01/2021ರಂದು ಜೀವವೈವಿಧ್ಯ ಮಂಡಳಿಯ **ಅಧ್ಯಕ್ಷರಾದ ಶ್ರೀ ಅನಂತ ಹೆಗಡೆ ಅಶೀಸರ** ಅವರ ನೇತೃತ್ವದಲ್ಲಿ ತಜ್ಞರ ಸಮಿತಿಯೊಂದು ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರ ತಾಲ್ಲೂಕಿನ **"ಕತ್ತಲೆಕಾನು ರಾಮಪತ್ರೆಜಡ್ಡಿ ಕಾನು"** ಪ್ರದೇಶಕ್ಕೆ ಭೆಟ್ಟಿ ನೀಡಿ ಶಿರಸಿ ಅರಣ್ಯ ವಿಭಾಗದ ಸಹಯೋಗದಲ್ಲಿ ಜರುಗಿದ ಈ ಸ್ಥಳಭೆಟ್ಟಿ ಹಾಗೂ ಸಮಾಲೋಚನಾ ಸಭೆಯಲ್ಲಿ ಮಂಗಳೂರು, ಶೃಂಗೇರಿ, ಹೊನ್ನಾವರ, ಕುಮಟಾ ಹಾಗೂ ಶಿರಸಿಯಿಂದ ಬಂದಿದ್ದ ವಿವಿಧ ತಜ್ಞರು ಭಾಗವಹಿಸಿದ್ದರು. ಈ ಸೂಕ್ಷ್ಮಪರಿಸರವನ್ನು ರಕ್ಷಿಸುವ ವಿಧಿ–ವಿಧಾನಗಳ ಕುರಿತಂತೆ ಚರ್ಚಿಸಿ, ನಿರ್ಣಯ ಕೈಗೊಳ್ಳಲಾಯಿತು.
- ದಿ.02/02/2021ರಂದು, **"ವಿಶ್ವ ಜೌಗು ದಿನಾಚರಣೆ"**ಯ ಸಂದರ್ಭದಲ್ಲಿ, ಜೀವವೈವಿಧ್ಯ ಮಂಡಳಿಯ ಅಧ್ಯಕ್ಷರಾದ ಶ್ರೀ ಅನಂತ ಹೆಗಡೆ ಅಶೀಸರ ಅವರ ನೇತೃತ್ವದಲ್ಲಿ ತಜ್ಞರ ನಿಯೋಗವು ಅರಣ್ಯ ಇಲಾಖೆಯ ಸನ್ಮಾನ್ಯ ಸಚಿವರಾದ **ಶ್ರೀ ಅರವಿಂದ ಲಿಂಬಾವಳಿ** ಅವರನ್ನು ಅವರ ಕಚೇರಿಯಲ್ಲಿ ಭೇಟಿಮಾಡಿ, ಜೀವವೈವಿಧ್ಯ ಸಂರಕ್ಷಣೆಯ ಸವಾಲುಗಳು ಹಾಗೂ ಸಾಧ್ಯತೆಗಳ ಕುರಿತು ಚರ್ಚಿಸಿದರು. ರಾಜ್ಯದ ವಿವಿಧ ರಾಮಪತ್ರೆಜಡ್ಡಿ ಜೌಗುಗಳು ಹಾಗೂ ಕೆಲವು ಅಮೂಲ್ಯ ಕೆರೆಗಳ ರಕ್ಷಣಾ ಯೋಜನೆಗಳನ್ನು ಮುಂಬರುವ ರಾಜ್ಯದ ಮುಂಗಡಪತ್ರದಲ್ಲಿ ಸೇರಿಸಲು ವಿನಂತಿಸಲಾಯಿತು. ಈ ಸಂದರ್ಭದಲ್ಲಿ ಮಾನ್ಯ ಶಾಸಕರುಗಳಾದ **ಶ್ರೀ ರಘುಪತಿ ಭಟ್** ಹಾಗೂ **ಶ್ರೀಮತಿ ಪೂರ್ಣಿಮಾ ಶ್ರೀನಿವಾಸ್,** ಅರಣ್ಯ ಮತ್ತು ಪರಿಸರ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ **ಶ್ರೀ ಸಂದೀಪ ದವೆ,** ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ **ಶ್ರೀ ಸಂಜಯ್ ಮೋಹನ್,** ಮಂಡಳಿಯ ಸದಸ್ಯ ಕಾರ್ಯದರ್ಶಿ **ಶ್ರೀ ಪುನೀತ್ ಪಾಠಕ್,** ಎ.ಪಿ.ಸಿ.ಸಿ.ಎಫ್. ಶ್ರೀ **ಸುಭಾಶ್ ಮಾಲ್ಕೇಡ್,** ವಿಜ್ಞಾನಿ **ಡಾ. ಟಿ.ವಿ. ರಾಮಚಂದ್ರ,** ಮಂಡಳಿಯ ತಜ್ಞರಾದ ಶ್ರೀ ಪ್ರೀತಮ್, ಮುಂತಾದವರು ಉಪಸ್ಥಿತರಿದ್ದರು.
- ದಿ.29/12/2020ರಂದು ಬೆಂಗಳೂರಿನ ಭಾರತೀಯ ವಿಜ್ಞಾನ ಮಂದಿರದ ಪರಿಸರ ವಿಜ್ಞಾನ ಕೇಂದ್ರವು ವಿಜ್ಞಾನಿ ಡಾ. ಟಿ.ವಿ.ರಾಮಚಂದ್ರ ಅವರ ಮಾರ್ಗದರ್ಶನದಲ್ಲಿ ಸಂಘಟಿಸಿದ ಕೆರೆಗಳ ಸಂರಕ್ಷಣೆಯ ಕುರಿತ **"ಅಂತರಾಷ್ಟ್ರೀಯ ಕೆರೆ ಸಮ್ಮೇಳನ"**ವನ್ನು (Lake–2020)" ಮಂಡಳಿಯ ಅಧ್ಯಕ್ಷರಾದ **ಶ್ರೀ ಅನಂತ ಹೆಗಡೆ ಅಶೀಸರ** ಉದ್ಘಾಟಿಸಿದರು. ಸಮಾರೋಪದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. (19–31, ಡಿಸಂಬರ್ 2020).
- ಶಿವಮೊಗ್ಗದ ಸಾಗರದಲ್ಲಿ, ಮಲೆನಾಡಿನ ಸುಸ್ಥಿರ ಅಭಿವೃದ್ಧಿ ಸಾಧಿಸಬಲ್ಲ ಕೃಷಿ–ಅರಣ್ಯ, ಔಷಧಿಮೂಲಿಕಾ ಕೃಷಿ, ಬೆಟ್ಟ ಅಭಿವೃದ್ಧಿ, ಹಾಗೂ ಬಿದಿರು ಕೃಷಿ ಕುರಿತು ಜರುಗಿದ ರಾಜ್ಯಮಟ್ಟದ ಸಮ್ಮೇಳನ ಹಾಗೂ ಜೇನುಕೃಷಿ ಕುರಿತ ವಿವಿಧ ಕಾರ್ಯಾಗಾರಗಳಲ್ಲಿ ಮಂಡಳಿಯ ಅಧ್ಯಕ್ಷರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದರು.



ಮಂಡಳಿಯ ಅಧ್ಯಕ್ಷರಿಂದ ತುಮಕೂರು ಜಿಲ್ಲಾ ಪಂಚಾಯತದ ಜೀವವೈವಿಧ್ಯ ನಿರ್ವಹಣಾ ಸಮಿತಿಯ ಪ್ರಗತಿ ಪರಿಶೀಲನೆ.



ಮಂಡಳಿಯ ಅಧ್ಯಕ್ಷರಿಂದ ಕುಂದಾಪುರ ಅರಣ್ಯ ವಿಭಾಗದ ಜೀವವೈವಿಧ್ಯ ನಿರ್ವಹಣಾ ಸಮಿತಿಯ ಪ್ರಗತಿ ಪರಿಶೀಲನೆ.




ಮಂಡಳಿಯ ಅಧ್ಯಕ್ಷರಿಂದ ತುಮಕೂರು ನಗರಸಭೆಯ ಜೀವವೈವಿಧ್ಯ ನಿರ್ವಹಣಾ ಸಮಿತಿಯ ಪ್ರಗತಿ ಪರಿಶೀಲನೆ.



ಮಂಡಳಿಯ ಅಧ್ಯಕ್ಷರಿಂದ ಗದಗ ಜಿಲ್ಲೆಯ ಜೀವವೈವಿಧ್ಯ ನಿರ್ವಹಣಾ ಸಮಿತಿಗಳ ಪ್ರಗತಿ ಪರಿಶೀಲನೆ.

## ಸಮಾಲೋಚನೆ ಹಾಗೂ ಪ್ರಗತಿ ಪರಿಶೀಲನಾ ಸಭೆಗಳು

- ದಿ. 25/02/2021ರಂದು, ಮಂಡಳಿಯ ಅಧ್ಯಕ್ಷರು ಹಾಗೂ ತಜ್ಞರು, ಬೆಂಗಳೂರಿನ ರಾಷ್ಟ್ರೀಯ ಹೈನುಗಾರಿಕಾ ಸಂಶೋಧನಾ ಸಂಸ್ಥೆಯ ನಿರ್ದೇಶಕ **ಡಾ. ಕೆ.ಪಿ. ರಮೇಶ** ಹಾಗೂ ಪಶುಸಂಗೋಪನಾ ಇಲಾಖೆಯ ನಿರ್ದೇಶಕ **ಡಾ. ಮಂಜುನಾಥ** ಅವರೊಂದಿಗೆ, ರಾಜ್ಯದ ಸಾಕುಪ್ರಾಣಿಗಳ (ಆಕಳು, ಎಮ್ಮೆ, ಕುರಿ, ಕೋಳಿ ಇತ್ಯಾದಿ) ಪಾರಂಪರಿಕ ತಳಿಗಳ ಪ್ರಸಕ್ತ ಪರಿಸ್ಥಿತಿ ಹಾಗೂ ಅವುಗಳ ಸಂರಕ್ಷಣೆ ಕುರಿತು ಸಮಾಲೋಚನೆ ಸಭೆ ನಡೆಸಿದರು.
- ದಿ.14/03/2021ರಂದು, ತೀರ್ಥಹಳ್ಳಿಯಲ್ಲಿ ರೋಟರಿ ಸಂಸ್ಥೆಯು ಆಯೋಜಿಸಿದ್ದ ಪರಿಸರ ಸಂರಕ್ಷಣೆ ಕುರಿತ ರಾಜ್ಯಮಟ್ಟದ ವಾರ್ಷಿಕ ಸಮ್ಮೇಳನವನ್ನು ಮಂಡಳಿಯ ಅಧ್ಯಕ್ಷರು ಉದ್ಘಾಟಿಸಿದರು.
- ದಿ.19/04/2021ರಂದು, "ಬೆಂಗಳೂರು ನಗರದ ಹಸಿರುಕವಚ ಹಾಗೂ ಜೀವವೈವಿಧ್ಯ ಹೆಚ್ಚಿಸುವ ಮಾರ್ಗ"ಗಳ ಕುರಿತು ಈ.ಎಸ್.ಜಿ. ಸಂಸ್ಥೆಯು ಸಂಘಟಿಸಿದ ವೆಬಿನಾರಿನ್ನು ಮಂಡಳಿಯ ಅಧ್ಯಕ್ಷರು ಉದ್ಘಾಟಿಸಿದರು.
- ಕೇಂದ್ರ ಅರಣ್ಯ ಮತ್ತು ಪರಿಸರ ಮಂತ್ರಾಲಯದ ಅಧೀನದ ಡೆಹರಾಡೂನಿನ "ಅರಣ್ಯ ಸಂಶೋಧನೆ ಮತ್ತು ಶಿಕ್ಷಣ ಪರಿಷತ್ತು" (ICFRE), " ಪರಿಸರದ ಸುಸ್ಥಿರ ನಿರ್ವಹಣೆ ಮಾರ್ಗಗಳ" ಕುರಿತು ಸಂಘಟಿಸಿದ್ದ ವೆಬಿನಾರಿನಲ್ಲಿ ಭಾಗಿ (April 5, 2021).
- ದಿ.29/12/2020ರಂದು, ಬೆಂಗಳೂರಿನ ಹೆಬ್ಬಾಳದಲ್ಲಿರುವ ICAR-National Bureau of Agricultural Insect Resources ಸಂಸ್ಥೆಗೆ, ಈ ಸಂಸ್ಥೆಯ ಆಡಳಿತ ಮಂಡಳಿಯ ಪದನಿಮಿತ್ತ ಸದಸ್ಯರೂ ಆಗಿರುವ ಜೀವವೈವಿಧ್ಯ ಮಂಡಳಿಯ ಅಧ್ಯಕ್ಷರಾದ ಶ್ರೀ ಅನಂತ ಹೆಗಡೆ ಅಶೀಸರ ಅವರು ಭೆಟ್ಟಿ ನೀಡಿ, "ಕೃಷಿ–ಜೀವವೈವಿಧ್ಯದಲ್ಲಿ ಕೀಟಗಳ ಮಹತ್ವ ಹಾಗೂ ಅವುಗಳ ಸಂರಕ್ಷಣೆ" ಕುರಿತಾಗಿ ಅಲ್ಲಿನ ವಿಜ್ಞಾನಿ ಸಮೂಹದೊಂದಿಗೆ ಚರ್ಚಿಸಿದರು.
- "ಪಾರಂಪರಿಕ ಜಾನುವಾರು ತಳಿಗಳ ಸಂರಕ್ಷಣೆ" ಕುರಿತಂತೆ ಸಾಗರ ತಾಲೂಕು ಮರಾನಕುಳಿ ಹಳ್ಳಿಯಲ್ಲಿ ಆಯೋಜಿತವಾಗಿದ್ದ ಜಿಲ್ಲಾ ಮಟ್ಟದ ಸಮಾಲೋಚನಾ ಸಭೆಯಲ್ಲಿ ಮಂಡಳಿಯ ಅಧ್ಯಕ್ಷರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದರು.
- ಡಿಸಂಬರ್ 2020ರಿಂದ ಮೇ 2021ರ ಅವಧಿಯಲ್ಲಿ, ಮಂಡಳಿಯ ಅಧ್ಯಕ್ಷರಾದ ಶ್ರೀ ಅನಂತ ಹೆಗಡೆ ಅಶೀಸರ ಅವರು ರಾಜ್ಯದ ವಿವಿಧ ಜಿಲ್ಲೆಗಳಿಗೆ ಭೆಟ್ಟಿಯಿತ್ತು, ಅಲ್ಲಿನ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ ಹಾಗೂ ಅರಣ್ಯ ವಿಭಾಗಗಳ ಮಟ್ಟದಲ್ಲಿ ಜೀವವೈವಿಧ್ಯ ಸಂರಕ್ಷಣೆ ಕಾನೂನು ಅನುಷ್ಠಾನ ಪ್ರಗತಿ ಪರಿಶೀಲನೆ ಹಾಗೂ ಸಮಾಲೋಚನಾ ಸಭೆಗಳನ್ನು ನಡೆಸಿದರು. ಆ ಜಿಲ್ಲೆಗಳೆಂದರೆ:
  - ✓ ದಾವಣಗೆರೆ, ಬೀದರ್, ಗದಗ, ಕಲ್ಬುರ್ಗಿ, ಬೆಳಗಾಂ, ಮಂಡ್ಯ, ತುಮಕೂರು ಹಾಗೂ ಉಡುಪಿ
  - ✓ ಬೆಳಗಾವಿ, ಹುಬ್ಬಳ್ಳಿ–ಧಾರವಾಡ, ಶಿರಸಿ, ದಾಂಡೇಲಿ ನಗರಸಭೆಗಳು
  - ✓ ಕುಂದಾಪುರ, ಪಾಂಡವಪುರ, ತೀರ್ಥಹಳ್ಳಿ, ಶೃಂಗೇರಿ, ಸೊರಬ, ಸಾಗರ, ಸಿದ್ದಾಪುರ, ಹೊನ್ನಾವರ, ಕುಮಟಾ, ಜೋಯ್ಡಾ ತಾಲ್ಲೂಕು ಪಂಚಾಯತಿ ಜೀವವೈವಿಧ್ಯ ಸಮಿತಿಗಳು
- **ವಿಶ್ವವಿದ್ಯಾನಿಲಯಗಳೊಂದಿಗೆ ಸಮಾಲೋಚನಾ ಸಭೆಗಳು:**
  - ✓ ಗ್ರಾಮೀಣಾಭಿವೃದ್ಧಿ ವಿಶ್ವವಿದ್ಯಾನಿಲಯ, ಗದಗ
  - ✓ ಹೈನುಗಾರಿಕೆ ಮತ್ತು ಪಶುಸಂಗೋಪನೆ ವಿಶ್ವವಿದ್ಯಾನಿಲಯ, ಬೀದರ್
  - ✓ ಕೆ.ಎಲ್.ಇ. ವಿಶ್ವವಿದ್ಯಾನಿಲಯ, ಬೆಳಗಾವಿ
- **ಅಧ್ಯಕ್ಷರು ಭೆಟ್ಟಿ ನೀಡಿದ ಸಂರಕ್ಷಣಾ ಆದ್ಯತೆಯ ಪ್ರಮುಖ ಸ್ಥಳಗಳು** : ಕುಂದಾದ್ರಿ ಬೆಟ್ಟ ಹಾಗೂ ಮಾಸ್ತಿಕಟ್ಟೆ (ಶಿವಮೊಗ್ಗ), ರೋರಿಚ್–ದೇವಿಕಾರಾಣಿ ತಾತಗುಣಿ ಎಸ್ಟೇಟ್ (ಬೆಂಗಳೂರು), ಮಾವಿನಗುಂಡಿ ಸತ್ಯಾಗ್ರಹಿಗಳ ಸ್ಮೃತಿವನ (ಉತ್ತರ ಕನ್ನಡ), ಕತ್ತಲೆಕಾನು ರಾಮಪತ್ರೆಜಡ್ಡಿ (ಉ.ಕ.), ವರದಳ್ಳಿ ಶ್ರೀಧರಾಶ್ರಮ ಸಂರಕ್ಷಿತ ಪರ್ವತ (ಶಿವಮೊಗ್ಗ), ಸರಸ್ವತಿನದಿ ಅಳಿವೆ, ಬೈಲೂರು (ಉ.ಕ), ಕೈಲಾಸಗುಡ್ಡ ಪ್ರದೇಶ (ಉ.ಕ.), ಸಾವನದುರ್ಗ ಔಷಧಿಮೂಲಿಕೆ ಸಂರಕ್ಷಣಾ ಪ್ರದೇಶ, ಮಾಗಡಿ (ರಾಮನಗರ), ಕಾಕತಿ ಅರಣ್ಯ(ಬೆಳಗಾವಿ),ಗಂಗೊಳ್ಳಿ ಅಳಿವೆ ಮತ್ತು ಕಡಲಾಮೆ ಸಂರಕ್ಷಣಾ ಕೇಂದ್ರ, ಕುಂದಾಪುರ (ಉಡುಪಿ), ಮೇಲುಕೋಟೆ ಅಭಯಾರಣ್ಯ (ಮಂಡ್ಯ), ಸಹಸ್ರಲಿಂಗ–ಶಾಲ್ಮಲಾ ನದಿಕಣಿವೆ (ಉ.ಕ.).



**ಮಂಡಳಿಯ ಅಧ್ಯಕ್ಷರಿಂದ ಶೃಂಗೇರಿ ತಾಲ್ಲೂಕು ಜೀವವೈವಿಧ್ಯ ನಿರ್ವಹಣಾ ಸಮಿತಿಗಳ ಪ್ರಗತಿ ಪರಿಶೀಲನೆ.**



**ಮಂಡಳಿಯ ಅಧ್ಯಕ್ಷರಿಂದ ಸದಾಶಿವಳ್ಳಿ ಗ್ರಾಮ ಪಂಚಾಯತದಲ್ಲಿ ಜೀವವೈವಿಧ್ಯ ನಿರ್ವಹಣಾ ಸಮಿತಿಯ ಪ್ರಗತಿ ಪರಿಶೀಲನೆ.**



**ಭೈರುಂಬೆ ಗ್ರಾಮ ಪಂಚಾಯತ ಜೀವವೈವಿಧ್ಯ ನಿರ್ವಹಣಾ ಸಮಿತಿಯ ಸದಸ್ಯರ ಜೊತೆ, ಮಂಡಳಿಯ ಅಧ್ಯಕ್ಷರು ಶಾಲ್ಮಲಾ ನದಿಕಣಿವೆಗೆ ಭೆಟ್ಟಿ ನೀಡಿದ್ದು.**



**ಮಂಡಳಿಯ ಅಧ್ಯಕ್ಷರು ತಜ್ಞರ ನಿಯೋಗದೊಂದಿಗೆ "ಕತ್ತಲೆಕಾನು ರಾಮಪತ್ರೆಜಡ್ಡಿ" ಪ್ರದೇಶಕ್ಕೆ ಭೆಟ್ಟಿ ನೀಡಿದ ಸಂದರ್ಭ.**

## ಇತ್ತೀಚಿನ ಯಶೋಗಾಥೆಗಳು

ಜೀವವೈವಿಧ್ಯಗಳ ಸಂರಕ್ಷಣೆ, ಸುಸ್ಥಿರ ಬಳಕೆ ಹಾಗೂ ಅದರಲ್ಲಿ ಬರುವ ಲಾಭದಲ್ಲಿ ಸಂರಕ್ಷಣೆಯಲ್ಲಿ ತೊಡಗಿರುವ ಸಮುದಾಯಗಳಿಗೂ ನ್ಯಾಯಯುತ ಪಾಲು ನೀಡುವದು ಜೀವವೈವಿಧ್ಯ ಕಾನೂನಿನ ಆಶಯ. ಇದನ್ನು ಅನುಷ್ಠಾನಗೊಳಿಸಲು ರಾಜ್ಯದ ಎಲ್ಲ ಸ್ಥಳೀಯ ಸಂಸ್ಥೆಗಳಾದ ಜಿಲ್ಲಾ ಪಂಚಾಯತ, ತಾಲ್ಲೂಕು ಪಂಚಾಯತ, ಗ್ರಾಮ ಪಂಚಾಯತ, ನಗರಸಭೆ ಹಾಗೂ ಪಟ್ಟಣಸಭೆಗಳಲ್ಲಿ ಈಗಾಗಲೇ **"ಜೀವವೈವಿಧ್ಯ ನಿರ್ವಹಣಾ ಸಮಿತಿ (ಜೀ.ನಿ.ಸ.)"**ಗಳನ್ನು ರಚಿಸಲಾಗಿದೆ. ಜಿಲ್ಲಾ ಹಾಗೂ ತಾಲ್ಲೂಕು ಮಟ್ಟಗಳಲ್ಲಿ ಕಾನೂನಿನ ಆಶಯಗಳ ಅನುಷ್ಠಾನದ ಪ್ರಗತಿ ಪರಿಶೀಲನೆ ಹಾಗೂ ಸಮಾಲೋಚನೆ ಸಭೆಗಳನ್ನು ನಡೆಸುವ ಪದ್ಧತಿಯನ್ನು ಮಂಡಳಿಯು ಜಾರಿಗೆ ತಂದಿದೆ. ಈ ಬಲವರ್ಧನೆ ಕಾರ್ಯಗಳಿಂದಾಗಿ ಜೀ.ನಿ.ಸ.ಗಳು ಕ್ರಿಯಾಶೀಲಗೊಳ್ಳುತ್ತಿರುವುದು ಸಂತಸದ ಸಂಗತಿಯಾಗಿದೆ. ಇತ್ತೀಚಿನ ಕೆಲವು ಜೀ.ನಿ.ಸ.ಗಳ ಯಶೋಗಾಥೆಗಳನ್ನು ಇಲ್ಲಿ ಪ್ರಾತಿನಿಧಿಕವಾಗಿ ನೀಡಲಾಗಿದೆ.

- ಹಲವು ಸ್ಥಳಿಯ ಸಂಸ್ಥೆಗಳು ತಮ್ಮ ವ್ಯಾಪ್ತಿಯಲ್ಲಿ ವನೀಕರಣ, ಮೂಲಿಕಾವನ ಸ್ಥಾಪನೆ, ಮಾಲಿನ್ಯ ನಿಯಂತ್ರಣ, ಜಲಮೂಲಗಳ ರಕ್ಷಣೆ, ಜೈವಿಕ ಇಂಧನ ಹಾಗೂ ಸೌರವಿದ್ಯುತ್ ಅಳವಡಿಕೆ ಮುಂತಾದ ಸುಸ್ಥಿರ ಅಭಿವೃದ್ಧಿ ವಿಧಾನಗಳನ್ನು ಹಮ್ಮಿಕೊಂಡಿವೆ.
- ಬೆಳಗಾವಿಯ ಜಿಲ್ಲಾ ಜೀ.ನಿ.ಸ.ಯು ಜಿಲ್ಲಾ ಆಡಳಿತದ ಸಹಯೋಗದಲ್ಲಿ, ತನ್ನ ವ್ಯಾಪ್ತಿಯ ಕಂದಾಯಭೂಮಿ ನೈಸರ್ಗಿಕ ಅರಣ್ಯದ ಸಂರಕ್ಷಣೆಯ ನಿಗಾವಹಿಸಲು ಪ್ರತ್ಯೇಕ ಸಮಿತಿಯನ್ನು ರಚಿಸಿದೆ.
- ದಾವಣಗೆರೆ ನಗರಪಾಲಿಕೆಯು ತನ್ನ ವ್ಯಾಪ್ತಿಯ ಕುಂದವಾಡ ಕೆರೆಯನ್ನು **"ಸ್ಮಾರ್ಟ್ ಸಿಟಿ"** ಯೋಜನೆಯಡಿ ಅಭಿವೃದ್ಧಿಪಡಿಸುತ್ತಿದೆ. ಕೆರೆಯ ನೈಸರ್ಗಿಕ ಸ್ವರೂಪಕ್ಕೆ ಧಕ್ಕೆ ಆಗದಂತೆ ಕಾಮಗಾರಿಗಳನ್ನು ಕೈಗೊಳ್ಳುವದು, ಜಲಚರಗಳನ್ನು ರಕ್ಷಿಸುವದು ಹಾಗೂ ಜಲಾನಯನ ತತ್ವಗಳನ್ನು ಪಾಲಿಸುವ ಕುರಿತಾಗಿ ನಗರಸಭೆಯ ಜೀ.ನಿ.ಸ.ಯು ನೀಡಿದ ಸಲಹೆಗಳನ್ನು ಅನುಷ್ಠಾನಗೊಳಿಸಲು ನಗರಸಭೆ ಒಪ್ಪಿದೆ.
- ಶಿವಮೊಗ್ಗ ಜಿಲ್ಲೆಯ ಭದ್ರಾವತಿ ಜಿ.ನಿ.ಸ.ಯು ತನ್ನ ವ್ಯಾಪ್ತಿಯಲ್ಲಿ ಐದು ಕೆರೆಗಳನ್ನು ಪುನಶ್ಚೇತನಗೊಳಿಸಲು ಹಾಗೂ ಖಾಲಿ ಜಾಗದಲ್ಲಿ ಹಸಿರುಹೊದಿಕೆ ನಿರ್ಮಿಸುವ ವನೀಕರಣ ಯೋಜನೆ ರೂಪಿಸುತ್ತಿದೆ.
- ಉತ್ತರ ಕನ್ನಡ ಜಿಲ್ಲೆಯ ಭೈರುಂಭೆ ಗ್ರಾಮ ಪಂಚಾಯತ ಜೀ.ನಿ.ಸ.ಯು ತನ್ನ ವ್ಯಾಪ್ತಿಯಲ್ಲಿನ ಶಾಲ್ಮಲಾ ನದಿಕಣಿವೆಯ ಸಮೃದ್ಧ ಪಶ್ಚಿಮಘಟ್ಟದ ಅರಣ್ಯವನ್ನು ರಕ್ಷಿಸಲು, ನಾಗರಿಕರ ಸಹಭಾಗಿತ್ವದೊಂದಿಗೆ ನಿರಂತರ ನಿಗಾ ಇಡುತ್ತಿದೆ.
- ದಕ್ಷಿಣ ಕನ್ನಡ ಜಿಲ್ಲೆಯ ಕಡಬ ತಾಲ್ಲೂಕು ಪಂಚಾಯತಿ ಜೀ.ನಿ.ಸ.ಯು ತನ್ನ ವ್ಯಾಪ್ತಿಯ ಕುಮಾರಧಾರ ನದಿಯ ಪರಿಸರಸೂಕ್ಷ್ಮ ಪ್ರದೇಶವಾದ ಉರುಂಬಿ ನದಿತೀರವನ್ನು ರಕ್ಷಿಸಲು ನಾಗರಿಕರ ಸಹಭಾಗಿತ್ವದೊಂದಿಗೆ ಜನಜಾಗೃತಿ ನಡೆಸುತ್ತಿದೆ. ಅದನ್ನು **"ನೈಸರ್ಗಿಕ ಪಾರಂಪರಿಕ ತಾಣ"** ಎಂದು ಘೋಷಿಸಲು ನಿರ್ಣಯ ಕೈಗೊಂಡಿದ್ದು, ಅದನ್ನು ರಾಜ್ಯ ಮಂಡಳಿಗೂ ಸಲ್ಲಿಸಿದೆ.
- ಉತ್ತರ ಕನ್ನಡ ಜಿಲ್ಲೆಯ ಕಡ್ಲೆ ಗ್ರಾಮ ಪಂಚಾಯತ ಜೀ.ನಿ.ಸ.ಯು ತನ್ನ ವ್ಯಾಪ್ತಿಯಲ್ಲಿ ಏಕಸಸ್ಯ ನೆಡುತೋಪು ಬೆಳೆಸದಂತೆ ಅರಣ್ಯ ಇಲಾಖೆಯ ಮನವೊಲಿಸಿ, ಅಲ್ಲಿ ಸ್ಥಳೀಯ ಪ್ರಬೇಧಗಳ ಮಿಶ್ರ ನೆಡುತೋಪು ಬೆಳೆಸಲು ಕೈಜೋಡಿಸಿದೆ.
- ಶಿವಮೊಗ್ಗ ಜಿಲ್ಲೆಯ ಗುಡವಿ ಗ್ರಾಮ ಪಂಚಾಯತ ಜೀ.ನಿ.ಸ.ಯು ತನ್ನ ವ್ಯಾಪ್ತಿಯ ಪ್ರಸಿದ್ಧ ಗುಡವಿ ಪಕ್ಷಿಧಾಮದ ಸೂಕ್ತ ನಿರ್ವಹಣೆ ಕಾರ್ಯದಲ್ಲಿ ಸ್ಥಳಿಯ ಅರಣ್ಯ ಇಲಾಖೆಯ ಜೊತೆ ಕೈಜೋಡಿಸಿದೆ.
- ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನ ಹಲವು ಗ್ರಾಮ ಪಂಚಾಯತ ಜೀ.ನಿ.ಸ.ಗಳು, ಸ್ಥಳೀಯ ಪ್ರಗತಿಪರ ಕೃಷಿಕರು ಹಾಗೂ ಸಂಘ–ಸಂಸ್ಥೆಗಳ ಸಹಯೋಗದೊಂದಿಗೆ ಅಪರೂಪದ ಮಿಡಿಮಾವಿನ ತಳಿಗಳ ಸಂರಕ್ಷಿಸುವ ಯೋಜನೆ ರೂಪಿಸುತ್ತಿವೆ.
- ಅರಣ್ಯ ಅತಿಕ್ರಮಣ, ಪರವಾನಗಿ ಇಲ್ಲದೆ ಮರಕಡಿಯುವುದು, ಅನಧಿಕೃತ ಗಣಿಗಾರಿಕೆ, ಅವೈಜ್ಞಾನಿಕ ಅರಣ್ಯ ಉತ್ಪನ್ನ ಸಂಗ್ರಹ– ಇತ್ಯಾದಿ ಪರಿಸರಕ್ಕೆ ಮಾರಕವಾದ ಚಟುವಟಿಕೆಗಳನ್ನು ನಿಯಂತ್ರಿಸಲು, ಮಲೆನಾಡಿನ ಹಲವು ಜಿಲ್ಲೆಗಳ ತಾಲ್ಲೂಕು ಹಾಗೂ ಗ್ರಾಮ ಪಂಚಾಯತ ಮಟ್ಟದ ಜೀ.ನಿ.ಸ.ಗಳು ವಿವಿಧ ಸರ್ಕಾರಿ ಇಲಾಖೆಗಳು ಹಾಗೂ ಸ್ಥಳಿಯರ ಸಹಭಾಗಿತ್ವದೊಂದಿಗೆ ಪ್ರಯತ್ನಿಸುತ್ತಿರುವುದು ಬಹು ಸ್ವಾಗತಾರ್ಹ ಸಂಗತಿಯಾಗಿದೆ.



**ಬೆಳಗಾವಿಯ ಕಾಕತಿ ಅರಣ್ಯ ಪ್ರದೇಶಕ್ಕೆ, ಜೀವವೈವಿಧ್ಯ ನಿರ್ವಹಣಾ ಸಮಿತಿ ಸದಸ್ಯರ ಜೊತೆ, ಮಂಡಳಿ ಅಧ್ಯಕ್ಷರ ಭೆಟ್ಟಿ.**



**"ಸ್ಮಾರ್ಟ್ ಸಿಟಿ" ಯೋಜನೆಯಡಿ ಅಭಿವೃದ್ಧಿಪಡಿಸಲಾಗುತ್ತಿರುವ ದಾವಣಗೆರೆಯ ಕುಂದವಾಡ ಕೆರೆಗೆ, ಮಂಡಳಿ ಅಧ್ಯಕ್ಷರ ಭೆಟ್ಟಿ.**



**ಸಾಗರ ತಾಲ್ಲೂಕು ಮರಾನಕುಳಿಯಲ್ಲಿ "ಪಾರಂಪರಿಕ ಜಾನುವಾರು ತಳಿಗಳ ಸಂರಕ್ಷಣೆ" ಸಮಾಲೋಚನಾ ಸಭೆಯಲ್ಲಿ ಮಂಡಳಿಯ ಅಧ್ಯಕ್ಷರು ಭಾಗಿ.**



**ಶಿವಮೊಗ್ಗ ಜಿಲ್ಲೆಯ ಯಡೇಹಳ್ಳಿ ಬಿ.ಎಮ್.ಸಿ ಸದಸ್ಯರೊಂದಿಗೆ, ಗಂಟಿಕೊಪ್ಪ ದೇವರಕಾಡಿಗೆ ಮಂಡಳಿಯ ಅಧ್ಯಕ್ಷರ ಭೆಟ್ಟಿ.**

## ಛಾಯಾಚಿತ್ರ ಅಂಕಣ



ಹೊಸ "ಮತ್ಸ್ಯಧಾಮ"ಗಳ ಕುರಿತ ಶಿಫಾರಸ್ಸು ಸಲ್ಲಿಸಲು, ಮಂಡಳಿಯ ಅಧ್ಯಕ್ಷರ ನಿಯೋಗವು ಸನ್ಮಾನ್ಯ ಮೀನುಗಾರಿಕಾ ಸಚಿವ ಶ್ರೀ ಕೆ. ಶ್ರೀನಿವಾಸ ಪೂಜಾರಿ ಅವರನ್ನು ಭೇಟಿಯಾದ ಸಂದರ್ಭ.



ಸನ್ಮಾನ್ಯ ಸಚಿವ ಶ್ರೀ ಈಶ್ವರಪ್ಪನವರು ಗ್ರಾಮೀಣಾಭಿವೃದ್ಧಿ ಇಲಾಖೆಯಡಿಯ ಜೀವವೈವಿಧ್ಯ ನಿರ್ವಹಣೆ ಸಮಿತಿಗಳ ಪ್ರಗತಿ ಪರಿಶೀಲನೆ ನಡೆಸಿದ ಸಂದರ್ಭದಲ್ಲಿ, ಮಂಡಳಿಯ ಅಧ್ಯಕ್ಷರು ಭಾಗವಹಿಸಿದರು.



ಬೆಂಗಳೂರಿನ ಭಾರತೀಯ ವಿಜ್ಞಾನ ಮಂದಿರದ ಪರಿಸರ ವಿಜ್ಞಾನ ಕೇಂದ್ರವು ಸಂಘಟಿಸಿದ "ಅಂತರಾಷ್ಟ್ರೀಯ ಕೆರೆ ಸಮ್ಮೇಳನ"ವನ್ನು (Lake-2020)", ಮಂಡಳಿಯ ಅಧ್ಯಕ್ಷ ಶ್ರೀ ಅನಂತ ಹೆಗಡೆ ಆಶೀಸರ ಅವರು ಉದ್ಘಾಟಿಸಿದ ಸಂದರ್ಭ.



ಮೇಲುಕೋಟೆಯ ಅಭಯಾರಣ್ಯದಲ್ಲಿ, ವಿನಾಶದಂಚಿನ *Cycas swamyi* ಗಿಡವನ್ನು (ಸಸ್ಯಶಾಸ್ತ್ರಜ್ಞ ಡಾ.ಬಿ.ಜಿ.ಎಲ್. ಸ್ವಾಮಿ ನೆನಪಿನಲ್ಲಿ ಹೆಸರಿಸಿರುವದು), ಮಂಡಳಿಯ ಅಧ್ಯಕ್ಷರು ವೀಕ್ಷಿಸುತ್ತಿರುವದು.



ಬೀದರಿನಲ್ಲಿರುವ ಹೈನುಗಾರಿಕೆ ಮತ್ತು ಪಶುಸಂಗೋಪನೆ ವಿಶ್ವವಿದ್ಯಾನಿಲಯಕ್ಕೆ, ಮಂಡಳಿಯ ಅಧ್ಯಕ್ಷರು ಭೆಟ್ಟಿಯಿತ್ತು ಸಮಾಲೋಚನೆ ನಡೆಸಿದರು.



ಉ.ಕ. ಜಿಲ್ಲೆಯ ಭಟ್ಕಳ ತಾಲ್ಲೂಕಿನ ಸರಸ್ವತಿನದಿ ಪ್ರದೇಶಕ್ಕೆ, ಬೈಲೂರು ಬಿ.ಎಮ್.ಸಿ. ಸದಸ್ಯರೊಂದಿಗೆ ಮಂಡಳಿಯ ಅಧ್ಯಕ್ಷರ ಭೆಟ್ಟಿ.



ಸಾವನದುರ್ಗ ಔಷಧಿಮೂಲಿಕೆ ಸಂರಕ್ಷಣಾ ಪ್ರದೇಶಕ್ಕೆ ಮಂಡಳಿಯ ಅಧ್ಯಕ್ಷರ ಭೆಟ್ಟಿ.



ಬೆಂಗಳೂರಿನ ತಾತಗುಣಿ ಎಸ್ಟೇಟಿನ ರೋರಿಚ್-ದೇವಿಕಾರಾಣಿ ಸಂರಕ್ಷಿತ ಪ್ರದೇಶಕ್ಕೆ ಮಂಡಳಿಯ ಅಧ್ಯಕ್ಷರ ಭೆಟ್ಟಿ

**Newsletter Publication Committee**

**Chief Patrons: Sri Anant Hegde Ashisar**, Hon. Chairman, KBB

**Sri Puneet Pathak IFS**, PCCF & Member Secretary, KBB

**Editorial Advice: Dr. Keshava H. Korse**

***Editorial Committee Members:***

| | |
|---|---|
| **Sri Kumar K.M**, ACF & AO | **Mrs. K.A. Pavitra** DD (Horti) |
| **Sri S.G. Nagaraj,** Acct. Sup. | **Mrs. Veena P.G.** (Consultant/ABS) |
| **Shri Shivamurthy Y. H** | **Ms. Ishwarya B. N.** (Consultant/PBR) |
| **Smt. Ambuja B.** | **Mr. Prasanna K.R.** (T.E./Botany) |
| **Mr.Kartik S.N.** | **Mr. Preetham** (SRA /Zoology) |
| **Mrs. Bhavani H.** | **Mrs. Shruthi S.** (T.E./Taxonomy) |
| *Publication coordinator:* | **Dr. C.R. Jawahar** (R.A./ Botany) |
| **Mr. Puttaraju S.P** (EA) | **Mrs. Vijayalaxmi** (T.E./Agriculture) |


***Printed Matter*** ***Book-Post***

***To,***

If *undelivered, please return to:* **Karnataka Biodiversity Board**

Ground Floor, Vana Vikasa, 18th Cross, Malleshwaram, Bengaluru-560003